ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಪುತ್ತೂರು ನಗರದಲ್ಲಿ ಒಳಚರಂಡಿ ಯೋಜನೆ

1116 (1537)

ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಎಡಿಬಿ ಯೋಜನೆಯಲ್ಲಿ ಪುತ್ತೂರು ನಗರ ಸಭೆ ಹಮ್ಮಿಕೊಂಡ ಯೋಜನೆಗಳು ಯಾವುವು ಅವು ಈಗ ಯಾವ ಹಂತದಲ್ಲಿವೆ. ಎಂದಿನಿಂದ ಕಾರ್ಯಾರಂಭ ಮಾಡಲಾಗುವುದು?

ಆ) ಎಡಿಬಿ ಯೋಜನೆಯಲ್ಲಿ ಪುತ್ತೂರು ನಗರದ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ, ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಪರ್ಯಾಯ ಯೋಜನೆಗಳನ್ನೇನಾದರೂ ಕೈಗೊಳ್ಳಲಾಗುವುದೇ?

ಶ್ರೀ ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಡಿಬಿ ಯೋಜನೆಯ ಅಡಿಯಲ್ಲಿ ಹಲವಾರು ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು. ಉದಾಹರಣೆಗೆ. ನೀರು ಸರಬರಾಜು, ರಸ್ತೆ, ಸಂಚಾರಿ ವ್ಯವಸ್ಥೆ, ಕೊಳಚೆಅಭಿವೃದ್ಧಿ ಮತ್ತು ಮಾರುಕಟ್ಟೆಗಳು ಇತ್ಯಾದಿ. ಪುತ್ತೂರು ನಗರದ ಜೊತೆಯಲ್ಲಿ ಇನ್ನೂ ಕೆಲವೊಂದು ನಗರಗಳಲ್ಲಿ ಮೇಲಿನಂತಹ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ಎಡಿಬಿ ಜೊತೆಯಲ್ಲಿ ಮಾತುಕತೆ ನಡೆಯುತ್ತಿದೆ. ಈ ಮಾತುಕತೆಯು ಇನ್ನೂ ಸಂಪೂರ್ಣವಾಗಿ ಮುಗಿದಿಲ್ಲ. ಈ ಮಾತುಕತೆ ಪೂರ್ಣಗೊಂಡ ನಂತರ ಎಡಿಬಿ ಜೊತೆ ಒಪ್ಪಂದಕ್ಕೆ ಸಹಿ ಆದ ನಂತರ ಈ ಮೇಲಿನ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಆ) -ಇಲ್ಲಾ-

ಪೌರಾಡಳಿತ ಇಲಾಖೆಯಲ್ಲಿ ಸರ್ಕಾರದ ಗಮನಕ್ಕೆ ತರದೆ ಮುಂಬಡ್ತಿ ನೀಡಿರುವುದು

1118(1609)

ಶ್ರೀ ಯು. ಆರ್. ಸಭಾಪತಿ (ಉಡುಪಿ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. 1996-97, 97-98 ಮತ್ತು 98-99 ಮಾರ್ಚ್‌ವರೆಗೆ ಸರ್ಕಾರದ ಗಮನಕ್ಕೆ ಬಾರದೆ ಪೌರಾಡಳಿತ ಇಲಾಖೆಯಲ್ಲಿ ಮುಂಬಡ್ತಿಗಳನ್ನು ಮಾಡಲಾಗಿರುವುದು ನಿಜವೇ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಹಾಗೂ ಅದಕ್ಕೆ ಕಾರಣಗಳೇನು?
2. ಈ ರೀತಿ ಮುಂಬಡ್ತಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?
3. ಇನ್ನು ಮುಂದೆ ಮುಂಬಡ್ತಿ ಮಾಡುವಾಗ ಸರ್ಕಾರದ ಗಮನಕ್ಕೆ ತಾರದೆ ಮಾಡಬಾರದೆಂದು ಸುತ್ತೋಲೆ ಹೋರಡಿಸಿರುವುದು ನಿಜವೇ?
4. ಮುಂಬಡ್ತಿಗಾಗಿ ಕಾದಿರುವವರ ಸಂಖ್ಯೆ ಎಷ್ಟು?